ಕನ್ನಡಪ್ರಭ

# ದಾಂಪತ್ಯ ಸಾಹಿತ್ಯಕ್ಕೆ ಸೂಕ್ಷ್ಮತೆ ತಂದವರು ಕೆಎಸ್‌ನ: ಕಂಬಾರ



ಕೆ.ಎಸ್.ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ವಿಚಾರ ಸಂಕಿರಣದಲ್ಲಿ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಕವಿ ಕೆಎಸ್‌ನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಾಹಿತಿಗಳಾದ ಡಾ.ಕಮಲಾ ಹಂಪನಾ, ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಶ್ರೀನಿವಾಸರಾವ್ ಹಾಜರಿದ್ದರು.

**ಬೆಂಗಳೂರು:** ಕನ್ನಡದ ಕೆಎಸ್‌ನ ಸಾಮಾನ್ಯ ಕವಿಯಾಗಿರದೆ ದಾಂಪತ್ಯ ಸಾಹಿತ್ಯಕ್ಕೆ ಸೂಕ್ಷ್ಮತೆ ತಂದುಕೊಡುವ ಮಟ್ಟಿಗೆ ಕವಿತೆ ರಚಿಸಿದರು ಎಂದು ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅಭಿಪ್ರಾಯ ಪಟ್ಟರು.

ಕೆ.ಎಸ್.ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ಅಂಗವಾಗಿ ಜೈನ್ ವಿಶ್ವವಿದ್ಯಾಲಯ ಹಾಗೂ ಸಾಹಿತ್ಯ ಅಕಾಡೆಮಿ ಭಾನುವಾರ ಆಯೋಜಿಸಿದ್ದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಹಿತ್ಯ ಪ್ರಕಾರಗಳಲ್ಲಿ ಪದ್ಯ ಹಾಗೂ ಭಾವಗೀತೆಗಳಿಗೆ ಅದರದ್ದೇ ಆದ ಮಿತಿಗಳಿವೆ. ಈ ಕಾರಣಕ್ಕಾಗಿ ಕಥೆಗಳ ಮೂಲಕ ಓದುಗರಿಗೆ ನೀಡುವ ಸಂತಸ ಭಾವಗೀತೆಗಳಲ್ಲಿ ಲಭ್ಯವಾಗುವುದಿಲ್ಲ. ಆದರೆ ಕಥೆಗಳು ನೀಡುವ ಸಂತಸವನ್ನೇ ಭಾವಗೀತೆಗಳು ನೀಡುವಂತೆ ಕೆಎಸ್‌ನ ಕವಿತೆ ರಚಿಸಿದರು. ಕನ್ನಡ ಸಾಹಿತ್ಯದಲ್ಲಿ ರತ್ನಾಕರವರ್ಣಿ ಶೃಂಗಾರ ರಚನೆಗಳಿಗೆ ಹೆಸರುವಾಸಿಯಾಗಿದ್ದನು. ಈ ಕವಿಯ ನಂತರ ಹಲವು ವರ್ಷಗಳಾದರೂ ಶೃಂಗಾರ ಕಾವ್ಯಗಳನ್ನು ಯಾರೂ ರಚಿಸಲಿಲ್ಲ. ನಂತರ ಬಂದ ಕೆಎಸ್‌ನ ಪರಿಣಾಮಕಾರಿಯಾಗಿ ಶೃಂಗಾರ ಕಾವ್ಯಗಳನ್ನು ಬರೆದರು. ಹದವಾದ ಭಾಷೆಯಲ್ಲಿ ದಾಂಪತ್ಯದ ಬಗ್ಗೆ ಕವಿತೆ ಬರೆಯುತ್ತಿದ್ದ ಕೆಎಸ್‌ನ, ಅಶ್ಲೀಲವಾಗದಂತೆ ಹಾಗೂ ಹೆಚ್ಚು ಗಂಭೀರವಾಗದಂತೆ ಕವಿತೆ ಬರೆಯುತ್ತಿದ್ದರು. ಭಾಷೆಯ ಕೆಲವೇ ಅಕ್ಷರಗಳಲ್ಲಿ ಇಡೀ ಭಾವನಾಪ್ರಪಂಚವನ್ನೇ ಓದುಗರ ಕಣ್ಣೆದುರು ಇಡುವ ಸೂಕ್ಷ್ಮತೆಯ ಸಾಮರ್ಥ್ಯ ಅವರಿಗಿತ್ತು ಎಂದರು.

ಲೇಖಕಿ ಡಾ.ಕಮಲಾ ಹಂಪನಾ ಮಾತನಾಡಿ, ಕೆಎಸ್‌ನ ಅಪ್ಪಟ ದೇಶೀಯ ಕವಿಯಾಗಿದ್ದು, ನಾಡಿನ ಸಂಸ್ಕೃತಿ, ಮಣ್ಣಿನ ಸೊಗಡು ಹಾಗೂ ಜಾನಪದ ಸತ್ವವನ್ನು ಕಾವ್ಯದಲ್ಲಿ ಮೂಡಿಸುತ್ತಿದ್ದರು. ಪ್ರೇಮ ಕಾವ್ಯ ಎಂದು ವರ್ಣಿಸುವುದಕ್ಕಿಂತ ಹೆಚ್ಚಾಗಿ 'ದಾಂಪತ್ಯ ಗೀತೆ' ಎಂಬ ಪದಬಳಕೆ ಅವರ ಕವಿತೆಗಳಿಗೆ ಸೂಕ್ತವಾಗಿದೆ ಎಂದರು.

ನಿರ್ದೇಶಕ ಟಿ.ಎಸ್.ನಾಗಾಭರಣ ಅವರ ಅಧ್ಯಕ್ಷತೆಯಲ್ಲಿ 'ಕೆ.ಎಸ್.ನರಸಿಂಹಸ್ವಾಮಿ: ವ್ಯಕ್ತಿತ್ವ ಮತ್ತು ಕೃತಿಗಳು' ವಿಚಾರ ಗೋಷ್ಠಿ ನಡೆಯಿತು. ಕನ್ನಡ ಸಲಹಾ ಸಮಿತಿ ಸಂಚಾಲಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್, ಜೈನ್ ವಿಶ್ವವಿದ್ಯಾಲಯದ ಪ್ರಾಂಶುಪಾಲ ಡಾ.ಶಾಂತಿ ಹಾಜರಿದ್ದರು.